# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ದೂರವಾಣಿ; 0816-225596, 0816-2255597, 0816-2255597 ಫ್ಯಾಕ್ಸ್ ; 0816-2270719


ಸಂಖ್ಯೆ:ತುವಿ:ಶೈವಿ:PG:2023–24:3865

ದಿನಾಂಕ:19.10.2023

## ಆದೇಶ

**ವಿಷಯ : ಅಧ್ಯಯನ ಮಂಡಳಿ ಸಭೆ ನಡೆಸಿ ಸಲ್ಲಿಸುವ ಹುಂಡಿಗಳನ್ನು ಪಾವತಿಸುವ ಕುರಿತು.**

**ಉಲ್ಲೇಖ :** 1) ಅಧ್ಯಕ್ಷರು, ಎಲ್. ಎಲ್. ಎಂ. ಅಧ್ಯಯನ ಮಂಡಳಿ, ಇವರ ಪತ್ರ ದಿನಾಂಕ:14.09.2023

2) ಸಂಚಾಲಕರು, ಸಂಸ್ಕೃತ ಅಧ್ಯಯನ ಮಂಡಳಿ, ಇವರ ಪತ್ರ ದಿನಾಂಕ:15.09.2023

3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.10.2023 (ಕಂಡಿಕೆ: 61 ಪುಟ ಸಂಖ್ಯೆ: 17)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಧ್ಯಯನ ಮಂಡಳಿಗಳು ಪಠ್ಯಕ್ರಮ ಸಿದ್ದಪಡಿಸುವ ಕುರಿತು ಸಭೆ ನಡೆಸಿ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರುಗಳ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಹುಂಡಿಗಳನ್ನು ಪಾವತಿಸುವಂತೆ ಉಲ್ಲೇಖ (1 & 2)ರಲ್ಲಿ ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲಾಗಿದೆ.

ಸದರಿ ವಿಷಯವನ್ನು ಪರಿಗಣಿಸಲಾಗಿ, ಇನ್ನು ಮುಂದೆ, ಎಲ್ಲಾ ಅಧ್ಯಯನ ಮಂಡಳಿಗಳು ಸಭೆ ನಡೆಸಿ ಪಾವತಿಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ, ಅಧ್ಯಯನ ಮಂಡಳಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರುಗಳ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಹುಂಡಿಗಳನ್ನು ನೇರವಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸುವಂತೆ ಈ ಮೂಲಕ ತಿಳಿಸಿದೆ.

ಮುಂದುವರೆದು, ಹಣಕಾಸು ಅಧಿಕಾರಿಗಳು ಸ್ವೀಕರಿಸುವ ಅಧ್ಯಯನ ಮಂಡಳಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರುಗಳ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಹುಂಡಿಗಳನ್ನು ನಿಯಮಾನುಸಾರ ಪಾವತಿಸಲು ಕ್ರಮವಹಿಸುವಂತೆ ಈ ಮೂಲಕ ತಿಳಿಸಿದೆ.

ಸದರಿ ವೆಚ್ಚವನ್ನು BOS ಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸುವಂತೆ ಈ ಮೂಲಕ ತಿಳಿಸಿದೆ.

**ಆದೇಶದ ಮೇರೆಗೆ**

ಕುಲಸಚಿವರು 19/10/23

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1) **ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**
2) **ಎಲ್ಲಾ ಅಧ್ಯಯನ ಮಂಡಳಿ ಅಧ್ಯಕ್ಷರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಪ್ರತಿಗಳು:

1) ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
2) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3) ಕಚೇರಿ ಪ್ರತಿ.